**ಕರ್ನಾಟಕ ವಿಧಾನ ಪರಿಷತ್ತು**

ಮಾನ್ಯ ಕರ್ನಾಟಕ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಸ್. ಎಲ್. ಭೋಜೇಗೌಡ - ರವರು **"ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಲವಾರು ತಜ್ಞ ವೈದ್ಯರುಗಳ ಖಾಯಂಪೂರ್ವ ಸೇವಾ ಅವಧಿ (ಪ್ರೊಬೆಷನರಿ ಅವಧಿ) ಘೋಷಣೆ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆಗಳು ಸ್ವೀಕೃತವಾಗಿ ಸುಮಾರು 2 ವರ್ಷಗಳಾಗಿದ್ದು, ಈ ತಜ್ಞ ವೈದ್ಯರ ಖಾಯಂಪೂರ್ವ ಸೇವಾ ಅವಧಿ (ಪ್ರೊಬೆಷನರಿ ಅವಧಿ) ಘೋಷಣೆ ಮಾಡಲು ವಿಳಂಬ ನೀತಿ ಅನುಸರಿಸಲಾಗುತ್ತಿದೆ. ಈ ಬಗ್ಗೆ ಹಲವಾರು ಬಾರಿ ಸದನದಲ್ಲಿ ಪ್ರಶ್ನೆಗಳನ್ನು ಹಾಕಲಾಗಿದ್ದರೂ ಯಾವುದೇ ಪ್ರಯೋಜನವಾಗಿರುವುದಿಲ್ಲ. ಲಕ್ಷಾಂತರ ರೂಪಾಯಿ ಸಂಬಳ ನೀಡುವ ಖಾಸಗಿ ಆಸ್ಪತ್ರೆಗಳನ್ನು ಸೇರದೆ ಸೇವಾ ಮನೋಭಾವದಿಂದ ಸರ್ಕಾರಿ ಆಸ್ಪತ್ರೆಗಳಿಗೆ ಸೇವೆ ಸಲ್ಲಿಸುತ್ತಿರುವ ವೈದ್ಯರುಗಳ ಖಾಯಂಪೂರ್ವ ಸೇವಾ ಅವಧಿ (ಪ್ರೊಬೆಷನರಿ ಅವಧಿ) ಘೋಷಣೆ, ಬಡ್ತಿ ಮತ್ತಿತರ ಸೇವಾ ವಿಷಯಗಳನ್ನು ಇತ್ಯರ್ಥಪಡಿಸಲು ವಿಳಂಬ ಮಾಡದೇ ತ್ವರಿತವಾಗಿ ಕ್ರಮ ಕೈಗೊಳ್ಳುವಂತೆ"** ಕೋರಿ ಪ್ರಸ್ತಾಪಿಸಲಾದ ನಿಯಮ-72ರಡಿಯ ಗಮನ ಸೆಳೆಯುವ ಸೂಚನಾ ಪತ್ರಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಹೇಳಿಕೆ.

*********

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿಯಿದ್ದ ವಿವಿಧ ತಜ್ಞತೆಯ 427 ತಜ್ಞ ವೈದ್ಯರು, 948 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಮತ್ತು 88 ದಂತ ಆರೋಗ್ಯಾಧಿಕಾರಿ ಹುದ್ದೆಗಳನ್ನು 2020ರ ವಿಶೇಷ ನೇಮಕಾತಿ ನಿಯಮಾವಳಿಯಡಿ ಭರ್ತಿ ಮಾಡಲಾಗಿರುತ್ತದೆ. ಅಭ್ಯರ್ಥಿಗಳನ್ನು Covid-19ರ ಸಾಂಕ್ರಾಮಿಕ ರೋಗದ ತುರ್ತು ಸಂದರ್ಭವಿದ್ದ ಕಾರಣ, ಅವರುಗಳನ್ನು ನೇಮಕಾತಿ ಮಾಡಲಾಗಿದ್ದು, ಸದರಿ ಆದೇಶದಲ್ಲಿ "ಅಭ್ಯರ್ಥಿಗಳ ಗುಣ ನಡತೆಯ ಪೊಲೀಸ್ ವರದಿ, ಪ್ರವರ್ಗ ಮೀಸಲಾತಿಯ ಸಿಂಧುತ್ವ ಪ್ರಮಾಣ ಪತ್ರ, ಮತ್ತು ಇತರೆ ಅಗತ್ಯ ದಾಖಲೆಗಳ ನೈಜತೆಯ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ವರದಿ ಪಡೆದುಕೊಂಡು ಪರಿಶೀಲಿಸುವ" ಷರತ್ತಿಗೆ ಒಳಪಡಿಸಲಾಗಿರುತ್ತದೆ.

ನೇಮಕಾತಿ ಆದೇಶದಲ್ಲಿ ವಿಧಿಸಲಾದ ಷರತ್ತಿನಂತೆ ಅಭ್ಯರ್ಥಿಗಳ ಪ್ರವರ್ಗ ಮೀಸಲಾತಿಗೆ ಸಂಬಂಧಿಸಿದ ಸಿಂಧುತ್ವ ಪ್ರಮಾಣ ಪತ್ರ ಹಾಗೂ ಗುಣ ನಡತೆಯ ಪೊಲೀಸ್ ವರದಿಗಳನ್ನು ಸೇವಾ ಸಿಂಧು ವ್ಯವಸ್ಥೆಯಡಿ ಸಕ್ಷಮ ಪ್ರಾಧಿಕಾರಗಳಿಂದ ಪಡೆದುಕೊಳ್ಳಲು ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 56 ಸೇನೆನಿ 2020, ದಿನಾಂಕ : 15/04/2020 ರಲ್ಲಿನ ಸೂಚನೆಯಂತೆ EDCS ನಿರ್ದೇಶನಾಲಯದಿಂದ Credentials ಗಳನ್ನು ಪಡೆದು, ಅಭ್ಯರ್ಥಿಗಳ ದಾಖಲೆಗಳನ್ನು Upload ಮಾಡಿ, ವರದಿಗಳನ್ನು ಪಡೆದುಕೊಳ್ಳಲಾಗುತ್ತಿದೆ.

ಇದಲ್ಲದೆ ಅಭ್ಯರ್ಥಿಗಳ ವೈದ್ಯಕೀಯ ಪದವಿ ಹಾಗೂ ಸ್ನಾತಕೋತ್ತರ ವೈದ್ಯಕೀಯ ಪದವಿಗಳ ಅಂಕಪಟ್ಟಿಯ ನೈಜತೆಯನ್ನು ಸಂಬಂಧಪಟ್ಟ ವಿಶ್ವವಿದ್ಯಾಲಯಗಳಿಂದ ಪಡೆದು ಖಚಿತಪಡಿಸಿಕೊಳ್ಳಲಾಗುತ್ತಿದೆ.

ವೈದ್ಯರುಗಳ ಖಾಯಂಪೂರ್ವ ಸೇವೆಯನ್ನು ಘೋಷಿಸುವ ಸಂಬಂಧವಾಗಿ ಕ್ಷೇತ್ರೀಯ ಕಛೇರಿ ಹಂತದಿಂದ ಹಾಗೂ ತನ್ಮೂಲಕ ಇಲಾಖಾ ಮುಖ್ಯಸ್ಥರಿಂದ ಅಗತ್ಯ ದಾಖಲೆ/ ಮಾಹಿತಿಗಳೊಂದಿಗೆ ಸಲ್ಲಿಸಲಾಗುತ್ತಿರುವ ಪ್ರಸ್ತಾವನೆಗಳನ್ನು ಪಡೆದು, ಅವರುಗಳು ಪರೀಕ್ಷಾರ್ಥ ಸೇವಾವಧಿ ಅಥವಾ ವಿಸ್ತರಿಸಲ್ಪಡುವ ಪರೀಕ್ಷಾರ್ಥ ಅವಧಿಯಲ್ಲಿ ಅಸಾಧಾರಣ ರಜೆ/ಅನಧಿಕೃತ ಗೈರು ಹಾಜರಿಯ ಅವಧಿಯಲ್ಲಿ ಇರುವುದಿಲ್ಲ ಎಂಬ ಬಗ್ಗೆ ಮಹಾಲೇಖಪಾಲರ ಕಛೇರಿಯಿಂದ ಮಾಹಿತಿ ಪಡೆದು, ನಿಯಮಾನುಸಾರ ಪರಿಶೀಲಿಸಿ, ಯಾವುದೇ ವಿಳಂಬವಿಲ್ಲದೆ ವೈದ್ಯಾಧಿಕಾರಿಗಳ ಪರೀಕ್ಷಾರ್ಥ ಸೇವೆಯು ತೃಪ್ತಿಕರವೆಂದು ಘೋಷಿಸಲು ಕ್ರಮವಹಿಸಲಾಗುತ್ತಿದೆ.

**(ಆಕುಕ 43 ಹೆಚ್‌ಎಸ್‌ಡಿ 2026)**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು